ಓ.ಎಸ್.ನಂ. 482/2012
ಪಿ. ಡಬ್ಲ್ಯೂ-1

ದಿನಾಂಕ: 08-02-2018 ರಂದು ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು:-** ಶ್ರೀ. ವಿ.ಎಸ್.ಶರಣಪ್ಪ, ವಕೀಲರಿಂದ:

(1) ಪ್ರತಿವಾದಿಯ ಗಂಡನ ಹೆಸರು ಬನ್ನೂರಸಾಬ. ಪ್ರತಿವಾದಿರವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ಖಲೀಲ ಇನ್ನೊಬ್ಬನ ಹೆಸರು ನನಗೆ ಗೊತ್ತಿಲ್ಲ. ದಾವಾ ಪೂರ್ವದಲ್ಲಿ ಸುಮಾರು 10-12 ವರ್ಷಗಳಿಂದ ಪ್ರತಿವಾದಿ ನನಗೆ ಪರಿಚಯವಿರುತ್ತಾಳೆ. ನಾನು ಸುಮಾರು 13 ವರ್ಷಕ್ಕಿಂತ ಮೇಲ್ಪಟ್ಟು ತಾವರಗೇರಾದಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಅಲ್ಲಿ ನಾಗಪ್ಪ ಎನ್ನುವವರ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ನಾನು ವಾಸಿಸುತ್ತಿರುವ ಬಾಡಿಗೆ ಮನೆಗೆ ಮತ್ತು ಪ್ರತಿವಾದಿಯ ಮನೆಗೆ ಸುಮಾರು ಅರ್ಧ ಕಿ.ಮಿ. ದೂರ ಆಗುತ್ತದೆ.

(2) ಪ್ರತಿವಾದಿಯ ಮನೆತನದಲ್ಲಿ ಪ್ರತಿವಾದಿ ಖಲೀಲ್ ಮಾತ್ರ ಪರಿಚಯವಿದ್ದು, ಆತನಿಗೆ ಪಾನಶಾಪ ಇದ್ದುದ್ದರಿಂದ ನಾನು ಅಲ್ಲಿಗೆ ಹೋದಾಗ ಪರಿಚಯವಾಗಿರುತ್ತದೆ. ಪ್ರತಿವಾದಿ ಮೊದಲು ನನಗೆ ಪರಿಚಯವಿರಲಿಲ್ಲ. ಪ್ರತಿವಾದಿಯನ್ನು ಪರಿಚಯ ಮಾಡಿಕೊಡಲು ಖಲೀಲಗೆ ನಾನು ಕೇಳಿಕೊಂಡಿಲ್ಲ. ದಾವೆ ಹಾಕುವ ಪೂರ್ವದಲ್ಲಿಯೂ ಸಹ ಪ್ರತಿವಾದಿಯನ್ನು ಪರಿಚಯ ಮಾಡಿಕೊಡಲು ಆತನ ಮಗ ಖಲೀಲಗೆ ನಾನು ಕೇಳಿರುವುದಿಲ್ಲ. ದಾವೆ ಹಾಕಿದ ನಂತರ ಪ್ರತಿವಾದಿಯ ಪರಿಚಯವನ್ನು ಮಾಡಿಕೊಡಲು ಆಕೆಯ ಮಗ ಖಲೀಲಗೆ ಕೇಳಿಕೊಂಡಿರುತ್ತೇನೆ. ದಾವಾ ಹಾಕುವ 6 ತಿಂಗಳ ಮುಂಚೆ ಪ್ರತಿವಾದಿಯ ಪರಿಚಯ ಮಾಡಿಕೊಡಲು ಆಕೆಯ ಮಗ ಖಲೀಲಗೆ ನಾನು ಕೇಳಿಕೊಂಡಿರುತ್ತೇನೆ. ಇದಕ್ಕಿಂತ ಪೂರ್ವದಲ್ಲಿ ನಾನು ಕೇಳಿಕೊಂಡಿಲ್ಲ. ದಾವೆ ಹಾಕುವ 6 ತಿಂಗಳ ಮುಂಚೆ ನನಗೆ ಪ್ರತಿವಾದಿ ಪರಿಚಯವಿಲ್ಲ. ದಾವೆ ಹಾಕುವ 6 ತಿಂಗಳ ಮುಂಚೆ

ಪ್ರತಿವಾದಿಯೊಂದಿಗೆ ಮುಖಾಮುಖಿ ಅವರ ಮನೆಯ ಹತ್ತಿರ ಆಗಿರುತ್ತದೆ. ನಾನು ಖಲೀಲ್ ಮನೆಗೆ ಹೋದಾಗ ಪ್ರತಿವಾದಿಯ ಪರಿಚಯವಾಗಿರುತ್ತದೆ. ಆ ದಿನ ನಾನೊಬ್ಬನೇ ಸಮಯ 11-00 ಗಂಟೆಗೆ ಮನೆಗೆ ಹೋಗಿರುತ್ತೇನೆ. ನಾನು ಪ್ರತಿವಾದಿಯ ಮನೆಗೆ ಹೋದಾಗ, ಪ್ರತಿವಾದಿ ಮತ್ತು ಆಕೆಯ ಮಗ ಖಲೀಲ ಮತ್ತು ನಾನು ಮೂವರು ಮಾತ್ರ ಇದ್ದೆವು. ಆ ದಿನ ಪ್ರತಿವಾದಿಯ ಮನೆಯಲ್ಲಿ 15-20 ನಿಮಿಷ ಇದ್ದೆನು. ಪುನ: ನಾನು ಪ್ರತಿವಾದಿಯ ಮನೆಗೆ ಹೋಗಿರುವುದಿಲ್ಲ. ಪುನ: ಪ್ರತಿವಾದಿಯ ಮನೆಗೆ ಕರೆದುಕೊಂಡು ಹೋಗಲು ಪ್ರತಿವಾದಿಯ ಮಗ ಖಲೀಲಗೆ ನಾನು ಕೇಳಿಕೊಂಡಿಲ್ಲ.

(3) ದಿ: 25-02-2010 ರಲ್ಲಿ ನನ್ನ ಮತ್ತು ಪ್ರತಿವಾದಿಯ ನಡುವೆ ಮನೆ ಖರೀದಿಯ ವ್ಯವಹಾರ ಆಗಿತ್ತು. ನಾನು ಈ ದಾವೆಯನ್ನು ಯಾವ ದಿನ, ಇಸ್ವಿಯಂದು ಮಾಡಿರುತ್ತೇನೆಂದು ನನಗೆ ನೆನಪಿಲ್ಲ. ದಾವಾ ಹಾಕುವ ಪೂರ್ವದಲ್ಲಿ ಪ್ರತಿವಾದಿಯರಿಗೆ ಮನೆಯನ್ನು ಬಿಡಲು ಕೇಳಿಕೊಂಡಿರುತ್ತೇನೆ. ಈ ದಾವೆಯನ್ನು ಪ್ರತಿವಾದಿಯು ಮನೆ ಬಿಡಲು ನಿರಾಕರಿಸಿದ್ದರಿಂದ ಸಲ್ಲಿಸಿರುತ್ತೇನೆ. ವ್ಯವಹಾರವು ಸಿ.ವಿ.ಪಾಟೀಲ ಇವರ ಸಮಕ್ಷಮ ಉಪ ನೋಂದಾಣಿಧಿಕಾರಿಗಲ ಕಛೇರಿಯ ಮುಂದೆ ಬರೆದಿರುತ್ತಾರೆ. ಅವರ ಪರಿಚಯ ನನಗೆ ಇಲ್ಲ, ಪ್ರತಿವಾದಿಗೆ ಇರುತ್ತದೆ. ಪ್ರತಿವಾದಿಯು ಮನೆಯನ್ನು ಮಗಳ ಮದುವೆಯ ಸಲುವಾಗಿ ನನಗೆ ಖರೀದಿಗೆ ಕೊಟ್ಟಿರುತ್ತಾಳೆ. ಆಕೆಯ ಮಗಳ ಹೆಸರು ನನಗೆ ಗೊತ್ತಿಲ್ಲ.

(4) ಪ್ರತಿವಾದಿಯ ಮನೆ ಜನತಾ ಕಾಲೋನಿಯ ಸರ್ವೇ ನಂ. 11 ರಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಹಾಕುವ ಪೂರ್ವದಲ್ಲಿ ದಾವಾ ಮನೆಯ ಉತಾರವನ್ನು ನನಗೆ ತೋರಿಸಿರುವುದಿಲ್ಲ. ಮನೆಯ ಉತಾರವನ್ನು ಸಿ.ವಿ.ಪಾಟೀಲ ಇವರ ಹತ್ತಿರ ಹೋದಾಗ ನೋಡಿಕೊಂಡಿರುತ್ತೇನೆ. ದಾವಾ ಹಾಕುವ ಪೂರ್ವ ಎಷ್ಟು ದಿನದಲ್ಲಿಲ ಮನೆಯಲ್ಲಿ ಉತಾರವನ್ನು ನೋಡಿಕೊಂಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಖರೀದಿ ದಿನ ಸಮಯ

12-00 ಗಂಟೆಗೆ ನಾನು ನೋಡಿಕೊಂಡಿರುತ್ತೇನೆಂದು ನುಡಿಯುತ್ತಾನೆ.

(5) ದಿ: 24-02-2010 ರಲ್ಲಿ ಖರೀದಿ ವ್ಯವಹಾರವು ನನ್ನ ಮನೆಯಲ್ಲಿಲ ಆಗಿರುತ್ತದೆ. ಆ ಸಮಯದಲ್ಲಿ ಖಲೀಲ, ಶಂಕ್ರಪ್ಪ, ಚಂದ್ರು ಮತ್ತು ಪ್ರತಿವಾದಿ ಇವರ ಸಮಕ್ಷಮ ಮಾತುಕತೆಯಾಗಿರುತ್ತದೆ. ಶಂಕ್ರಪ್ಪ ಮತ್ತು ಚಂದ್ರು ಇವರ ಊರು ಯಾವುದು ಎಂದು ನನಗೆ ಗೊತ್ತಿಲ್ಲ. ವ್ಯವಹಾರ ಆದ ದಿನ ಮನೆಯ ಉತಾರವನ್ನು ನನಗೆ ತೋರಿಸಿರುವುದಿಲ್ಲ. ಮನೆಯು ಪ್ರತಿವಾದಿಗೆ ಯಾರಿಂದ ಬಂತು ಎಂದು ನಾನು ವಿಚಾರ ಮಾಡಿದ್ದು, ಅದು ಅವರ ತಂದೆಯ ಕಡೆಯಿಂದು ಬಂದಿರುವ ಆಸ್ತಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಮನೆಯು ಪ್ರತಿವಾದಿಯ ತಂದೆಗೆ ಹೇಗೆ ಬಂತು ಎಂದು ನಾನು ವಿಚಾರ ಮಾಡಿರುವುದಿಲ್ಲ. ಪ್ರತಿವಾದಿಯ ಮಕ್ಕಳ ಬಗ್ಗೆ ವಿಚಾರ ಮಾಡಿರುತ್ತೇನೆ, ಆ ಸಮಯದಲ್ಲಿ ಅವರು ಇಬ್ಬರು ಗಂಡು ಮಕ್ಕಳು ಇರುತ್ತಾರೆಂದು, ಹೆಣ್ಣುಮಕ್ಕಳು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಖರೀದಿ ವ್ಯವಹಾರವನ್ನು ಪ್ರತಿವಾದಿ, ಖಲೀಲ, ಶಂಕ್ರಪ್ಪ ಮತ್ತು ಮಲ್ಲಿಕಾರ್ಜುನ ಇವರು ಮುಗಿಸಿರುತ್ತಾರೆ. ಶಂಕ್ರಪ್ಪನು ತನ್ನ ಸಹಿಯನ್ನು ಶಂಕ್ರಪ್ಪ ಎಂದು ಮಾಡುತ್ತಾನೆ. ಶಂಕ್ರಪ್ಪ, ಚಂದ್ರು, ಮಲ್ಲಿಕಾರ್ಜುನ ಇವರು ಪ್ರತಿವಾದಿಗೆ ಪರಿಚಯುವಿರುವ ಬಗ್ಗೆ ನನಗೆ ಗೊತ್ತಿಲ್ಲ.

(6) ಖರೀದಿ ವ್ಯವಹಾರದ ಮಾತುಕತೆಯ ಹಿಂದಿನ ದಿನ ಸಮಯ 2-00 ಗಂಟೆಗೆ ಪ್ರತಿವಾದಿಯ ಮನೆಗೆ ಹೋಗಿ ನೋಡಿಕೊಂಡು ಬಂದಿರುತ್ತೇನೆ. ದಾವಾ ಮನೆಯು ಆರ್.ಸಿ.ಸಿ. ಮನೆಯಾಗಿರುತ್ತದೆ. ದಾವಾ ಮನೆಯು 30x30 ಅಡಿ ಇರುತ್ತದೆ. ಕಂಪೌಂಡ 3 ಅಡಿ ಇರುತ್ತದೆ. ದಾವಾ ಮನೆಯ ಸ್ಥಳದಲ್ಲಿ ಪ್ಲಾಟುಗಳು 7-8 ಲಕ್ಷ ಬೆಳೆಬಾಳುತ್ತವೆ ಎಂದರೆ ನನಗೆ ಗೊತ್ತಿಲ್ಲ.

(7) ದಾವಾ ಮನೆಯ ಮೌಲ್ಯ 3 ಲಕ್ಷ ಇರುತ್ತದೆ. ಆ ಕಾಲದಲ್ಲಿ ನನ್ನ ಬಳಿ 3 ಲಕ್ಷ ಇತ್ತು. ಆ ದಿನವೇ ನಾನು 3 ಲಕ್ಷ ಹಣ ಪ್ರತಿವಾದಿಗೆ ಕೊಡಲು ಹೋಗಿದ್ದೆ, ಆದರೆ ಅವರು ನನಗೆ ಮನೆ

ಇಲ್ಲ 2 ವರ್ಷ ಆದ ನಂತರ ಉಳಿದ ಹಣ ನೀಡಿ ನೊಂದಣಿ ಮಾಡಿಸಿಕೊಡುತ್ತೇನೆಂದು ತಿಳಿಸಿರುತ್ತಾರೆ. ಈ ವಿಷಯವನ್ನು ಖರೀದಿ ಪತ್ರದಲ್ಲಿ ಬರೆಸಿರುತ್ತೇನೆ. ಈ ವಿಷಯವನ್ನು ಪ್ರತಿವಾದಿ ಮತ್ತು ಖಲೀಲ ಸಿ.ವಿ. ಪಾಟೀಲ ರವರಿಗೆ ಹೇಳಿ ಖರೀದಿ ಪತ್ರದಲ್ಲಿ ಬರೆಸಿರುತ್ತಾರೆ. ನಾನು 3 ಲಕ್ಷ ಕೊಡಲು ತಯಾರಿದ್ದೆ. ಆದರೆ ಪ್ರತಿವಾದಿಯು ಕೇಳಿಕೊಂಡಿದ್ದರಿಂದ ಈ ವಿಷಯವನ್ನು ಸಿವಿ.ಪಾಟೀಲ ರವರಿಗೆ ತಿಳಿಸಿರುತ್ತೇನೆ. 3 ಲಕ್ಷ ಹಣವನ್ನು ಸಿ.ವಿ.ಪಾಟೀಲ, ಮತ್ತು ಸಾಕ್ಷಿದಾರರಿಗೆ ತೋರಿಸಿರುತ್ತೇನೆ. ಆಗ ಸಮಯ 1-30 ಗಂಟೆಯಾಗಿತ್ತು.

(8) ಪ್ರತಿವಾದಿ ಮತ್ತು ಖಲೀಲ ಇವರನ್ನು ಶಂಕ್ರಪ್ಪ, ಮಲ್ಲಿಕಾರ್ಜು ಇವರು ನೊಂದಣಿ ಕಛೇರಿಯಲ್ಲಿ ಗುರುತಿಸಿರುತ್ತಾರೆ. ಪ್ರತಿವಾದಿಗೆ ಓದಲು, ಬರೆಯಲು ಬರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾನೆ. ಸಿ.ವಿ.ಪಾಟೀಲ ರವರ ಹತ್ತಿರ ಪ್ರತಿವಾದಿಯು ಮೂರು ಹೆಬ್ಬೆಟ್ಟು ಗುರುತನ್ನು ಹಾಕಿರುತ್ತಾರೆ. ನಿ.ಪಿ-1 ನ್ನು ಸಮಯ 1-00 ಗಂಟೆಗೆ ಬರೆದಿರುತ್ತಾರೆ. ಮಾಹಿತಿ ಕೊಟ್ಟಾಗ ಸಮಯ 11-00 ಗಂಟೆ ಆಗಿತ್ತು. ಖರೀದಿ ಪತ್ರವನ್ನು ಗಣಕೀಕರಣವನ್ನು ಮಾಡಲು 1 ಗಂಟೆಯಾಯಿತು. ನಿ.ಪಿ-1 ನ್ನು ರೂ. 500/- ಶುಲ್ಕವನ್ನು ಪ್ರತಿವಾದಿಯು ನೊಂದಣಿ ಕಛೇರಿಯಲ್ಲಿ ಪಾವತಿಸಿರುತ್ತಾರೆ. ಖರೀದಿ ಕರಾರು ಪತ್ರದಲ್ಲಿ 3 ವರ್ಷಗಳ ಒಳಗಡೆ ನೊಂದಣಿ ಮಾಡಿಸಿಕೊಡುತ್ತೇವೆಂದು ಷರತ್ತು ಇತ್ತು. ಪ್ರತಿವಾದಿಯು ಮನೆ ಬಿಡುವ ದಿನಾಂಕವನ್ನು ನನಗೆ ತಿಳಿಸಿರಲಿಲ್ಲ, ಆದರೆ ಬೇರೆ ಮನೆ ಸಿಕ್ಕಿದ ತಕ್ಷನ ಮನೆ ಬಿಡುತ್ತೇವೆಂದು ತಿಳಿಸಿರುತ್ತಾರೆ. ಈ ವಿಷಯವನ್ನು ಕರಾರು ಪತ್ರದಲ್ಲಿ ಸಿವಿ.ಪಾಟೀಲ ರವರು ಕಾಣಿಸಿರುತ್ತಾರೆ.

(9) ನಿ.ಪಿ-1 ಆದ ನಂತರ 1 ವರ್ಷ ಬಿಟ್ಟು ನಾನು ಪ್ರತಿವಾದಿಯ ಮನೆಗೆ ಹೋಗಿ ಬಿಡಲು ಕೇಳಿಕೊಂಡಿರುತ್ತೇನೆ. ಆಗ ನಾನು ಹಣವನ್ನಾದರೂ ನೀಡಿ, ಅಥವಾ ಮನೆಯನ್ನು

ಬಿಟ್ಟುಕೊಡಲು ಕೇಳಿಕೊಂಡಿರುತ್ತೇನೆ. ಆದರೆ ಅದಕ್ಕೆ ಪ್ರತಿವಾದಿ ಸ್ಪಂದಿಸಲಿಲ್ಲ. ಇದಾದ ನಂತರ ನನಗೆ ಮತ್ತು ಪ್ರತಿವಾದಿಗೆ ಮುಖಾಮುಖಿ ಭೇಟಿಯಾಗಿರುವುದಿಲ್ಲ.

(10) ನಿ.ಪಿ-1 ನ್ನು ತಯಾರಿಸಲು ಪ್ರತಿವಾದಿ ಮತ್ತು ಖಲೀಲ ರವರು ಸಿವಿ.ಪಾಟೀಲ ರವರಿಗೆ ತಿಳಿಸಿರುತ್ತಾರೆ. ಸಿವಿ. ಪಾಟೀಲ ರವರ ರೂಮ ಉತ್ತರ ದಿಕ್ಕಿಗೆ ಇರುತ್ತದೆ. ನಿ.ಪಿ-1 ರಲ್ಲಿ ಮನೆ ನಂ. ಉದ್ದಳತೆ, ಮತ್ತು ಚಕ್ಕಬಂದಿ ಪ್ರತಿವಾದಿ ಹೇಳಿ ಬರೆಸಿರುತ್ತಾರೆ. ನಿ.ಪಿ-1 ರಲ್ಲಿ ಮನೆಯು ಪ್ರತಿವಾದಿಯ ಗಂಡನಿಂದ ಪ್ರತಿವಾದಿಗೆ ಬಂದಿರುತ್ತದೆ ಎಂದು ಹೇಳಿ ಬರೆಸಿರುತ್ತಾಳೆ. ನಿ.ಪಿ-1 ಕ್ಕೆ ನಾನು ಖರೀದಿದಾರನಾಗಿ ಒಂದು ಸಹಿಯನ್ನು ಮಾಡಿರುತ್ತೇನೆ. ನನ್ನ ಸಹಿಯನ್ನು ಸಿ.ವಿ.ಪಾಟೀಲ ರವರ ಸಮಕ್ಷಮ ಮಾಡಿರುತ್ತೇನೆ. ಮಲ್ಲಿಕಾರ್ಜು ತಂದೆ ಯಮನಪ್ಪ ಇವರು ತಾವರಗೇರಾದವರು. ಇವರ ತಂದೆಯ ಹೆಸರನ್ನು ನಿ.ಪಿ-1 ರಲ್ಲಿ ಬರೆದಿರುವ ಬಗ್ಗೆ ನಾನು ನೋಡಿಲ್ಲ. ಶಂಕ್ರಪ್ಪ ವಣಗೇರಾದವರು ಎಂದರೆ ನನಗೆ ಗೊತ್ತಿಲ್ಲ. ಆತನು ನನಗೆ ಖರೀದಿ ಸಮಯದಲ್ಲಿ ಪರಿಚಯ. ಶಂಕ್ರಪ್ಪ ಇವರ ತಂದೆಯ ಹೆಸರು ಮತ್ತು ಅಡ್ಡ ಹೆಸರು ನಿ.ಪಿ-1 ರಲ್ಲಿ ಬರೆದಿರುವ ಬಗ್ಗೆ ನಾನು ನೋಡಿಲ್ಲ, ಸಹಿ ಮಾತ್ರ ನೊಡಿರುತ್ತೇನೆ. ನಿ.ಪಿ-1 ರಲ್ಲಿ ಆಂಗ್ಲ ಭಾಷೆಯಲ್ಲಿ ಶಂಕ್ರಪ್ಪ ಎಂದು ಸಹಿ ಮಾಡಿರುತ್ತಾನೆ. ನನಗೆ ಕನ್ನಡ ಮತ್ತು ಇಂಗ್ಲೀಷ ಓದಲು, ಬರೆಯಲು ಬರುವುದಿಲ್ಲ. ನಿ.ಪಿ-1 ರಲ್ಲಿ ಮಲ್ಲಿಕಾರ್ಜುನ ತನ್ನ ಸಹಿಯನ್ನು ಮಲ್ಲಿಕಾರ್ಜುನ ಎಂದು ಅಂಗ್ಲ ಭಾಷೆಯಲ್ಲಿ ಸಹಿಯನ್ನು ಮಾಡಿರುತ್ತಾನೆ. ನನಗೆ ಆಂಗ್ಲ ಭಾಷೆಯ ಬಗ್ಗೆ ಗೊತ್ತಿದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾನೆ. ಮಲ್ಲಿಕಾರ್ಜುನ ತನ್ನ ಸಹಿಯನ್ನು ಎಷ್ಟು ಆಂಗ್ಲ ಅಕ್ಷರಗಳಿಂದ ಸಹಿ ಮಾಡಿರುತ್ತಾನೆಂದು ನನಗೆ ಗೊತ್ತಿಲ್ಲ.

(11) ನಿ.ಪಿ-1 ಕ್ಕೆ ಮೊದಲು ಪ್ರತಿವಾದಿ ಸಹಿ ಮಾಡಿರುತ್ತಾಳೆ. ಪ್ರತಿವಾದಿಯು ತನ್ನ

ಗಂಡನ ಹೆಸರು ಮತ್ತು ಅಡ್ಡಹೆಸರನ್ನು ನಿ.ಪಿ-1 ರಲ್ಲಿ ಬರೆದಿರುವ ಬಗ್ಗೆ ನಾನು ನೋಡಿಲ್ಲ. ನಿ.ಪಿ-1 ಕ್ಕೆ ರೂ. 2/- ರ ಸ್ಟ್ಯಾಂಪ ಪೇಪರ್ ಮೊದಲ ಪುಟಕ್ಕೆ ಸಹಿಯನ್ನು ಸಿವಿ.ಪಾಟೀಲ ರವರು ಪಡೆದುಕೊಂಡಿರುತ್ತಾರೆ. ಸಾಕ್ಷಿದಾರರ ತಮ್ಮ ಸಹಿಗಳನ್ನು ರೂ. 2/- ಸ್ಟ್ಯಾಂಪ ಪೇಪರ ನ ಮೊದಲು ಪುಟಕ್ಕೆ ಒಟ್ಟಾಗಿ ಮಾಡಿರುತ್ತಾರೆ. ಸಿ.ವಿ.ಪಾಟೀಲ ರವರು ತಮ್ಮ ಸಹಿಯನ್ನು ಮೊದಲ ಪುಟಕ್ಕೆ ಮಾಡಿರುತ್ತಾರೆ. ಸಿ.ವಿ.ಪಾಟೀಲ ರವರು ಪ್ರತಿವಾದಿಗೆ ಮೊದಲ ಪುಟಕ್ಕೆ ಸಹಿಯನ್ನು ಮಾಡಲು ತಿಳಿಸಿರುವುದಿಲ್ಲ. ನಿ.ಪಿ-1 ಕ್ಕೆ ಯಾವ ಪುಟಕ್ಕೆ ಸಹಿ ಪಡೆದುಕೊಳ್ಳುತ್ತಿರಾ ಎಂದು ನಾನು ವಿಚಾರ ಮಾಡಿಲ್ಲ. ನಿ.ಪಿ-1 ರಲ್ಲಿರುವ ವಿಷಯಗಳ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇದೆಯೇ ಎಂದರೆ ಸಿವಿ. ಪಾಟೀಲ ರವರು ನಮಗೆ ಓದಿ ತಿಳಿಸಿ, ನಿಮಗೆ ಒಪ್ಪಿಗೆ ಇದೆಯೇ ಎಂದು ಕೇಳಿರುತ್ತಾರೆ. ನಿ.ಪಿ-1 ರಲ್ಲಿ ವಿನೇನೂ ಬರೆದಿದೆ ಎಂದು ನಿಮಗೆ ಮಾಹಿತಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಖರೀದಿಗೆ ಕೊಟ್ಟಿರುತ್ತೇವೆಂದು ಮಾಹಿತಿ ಇರುತ್ತದೆ. ಖರೀದಿ ಕರಾರು ಪತ್ರದಲ್ಲಿ 2 ½ ಲಕ್ಷ ಮೊತ್ತವನ್ನು ಕಾಣಸಿರುತ್ತಾರೆ. ಈ ಮೊತ್ತವನ್ನು ಬಿಟ್ಟು ಬೇರೆ ಮೊತ್ತವನ್ನು ಕಾಣಿಸಿರುವುದಿಲ್ಲ. ಖರೀದಿ ಕರಾರು ಪತ್ರದ ಮೊತ್ತವನ್ನು ಸಿ.ವಿ.ಪಾಟೀಲ ಇವರ ರೂಮಿನಲ್ಲಿ ಪೂರ್ಣವಾಗಿ ಕೊಟ್ಟಿರುತ್ತೇನೆ. ಆಗ ಸಮಯ 1-40 ಗಂಟೆ ಆಗಿತ್ತು. ಮೊತ್ತವನ್ನು ಪ್ರತಿವಾದಿಯ ಕೈಗೆ ನೀಡಿರುತ್ತೇನೆ. ಆ ಸಮಯದಲ್ಲಿ ನಾನು, ಪ್ರತಿವಾದಿ, ಖಲೀಲ, ಶಂಕ್ರಪ್ಪ, ಮಲ್ಲಿಕಾರ್ಜು, ಮತ್ತು ಸಿವಿ. ಪಾಟೀಲ ರವರು ಇದ್ದೆವು. ನಾನು, ಪ್ರತಿವಾದಿ ಮತ್ತು ಸಾಕ್ಷಿದಾರರೆಲ್ಲರೂ ಸೇರಿ ಕುಷ್ಟಗಿಗೆ ಬಂದಿರುತ್ತೇವೆ. ಸಿ.ವಿ.ಪಾಟೀಲ ರವರು ನಿ.ಪಿ-1 ಕ್ಕೆ ತಮ್ಮ ಸೀಲ ಹಾಕಿ ಸಹಿಯನ್ನು ಮಾಡಿರುತ್ತಾರೆ.

(12) ಉಪ ನೋಂದಣಾಧಿಕಾರಿ, ಕಚೇರಿಯವರು ಹಣವನ್ನು ನೀಡಿದ ಬಗ್ಗೆ ಕೇಳಿದಾಗ ಸಮಯ 2-00 ಗಂಟೆ ಆಗಿತ್ತು. ಉಪ ನೋಂದಣಾಧಿಕಾರಿ ಕಛೇರಿಗೆ ನಾನು,

ಪ್ರತಿವಾದಿ, ಖಲೀಲ ಮತ್ತು ಸಾಕ್ಷಿದಾರರೆಲ್ಲರೂ ಸೇರಿ ಹೋಗಿರುತ್ತೇವೆ. ದಾವಾ ಮನೆ ಸರ್ಕಾರ ಜಮೀನಿಗೆ ಸೇರಿದ್ದು ಎಂದು ಬರೆಸಿಲ್ಲ, ನನ್ನದು ಎಂದು ಬರೆಸಲಾಗಿದೆ. ನಿ.ಪಿ-1 ರಲ್ಲಿ ದಾವಾ ಮನೆಯು ಸರ್ಕಾರ, ಗೊಮಾಳ, ಅರಣ್ಯ ಭೂಮಿ, ಅಚ್ಚಕಟ್ಟು ಪ್ರದೇಶ, ದೇವಸ್ಥಾನದ ಜಮೀನು ಸೇರಿರುವುದಿಲ್ಲ ಎಂದು ಪ್ರತಿವಾದಿ ಹೇಳಿ ಬರೆಸಿರುವುದಿಲ್ಲ. ಅದೇ ರೀತಿ ನಿ.ಪಿ-1 ರಲ್ಲಿ ದಿ: 11-6-2006 ರಂದು ಸರ್ಕಾರವು ಹೊರಡಿಸಿದ ಸುಗ್ರಿವಾಜ್ಞೆ 3/2006 ಕ್ಕೆ ವಿರುದ್ಧವಾಗಿರುವುದಿಲ್ಲ" ಅಂತಾ ಹೇಳಿ ಬರೆಸಿರುವುದಿಲ್ಲ.

(13) ದಾವಾ ಮನೆಯು ಸರ್ವೇ ನಂ. 111 ರಲ್ಲಿ ಇದ್ದು, 1984 ನೇ ಇಸ್ವಿಯಲ್ಲಿ ಸರ್ಕಾರವು ಪ್ರತಿವಾದಿಯ ಗಂಡ ಹಸನಸಾಬನಿಗೆ ಹಕ್ಕುಪತ್ರ ನೀಡಿರುತ್ತಾರೆಂದರೆ ಸರಿಯಲ್ಲ. ಹಕ್ಕುಪತ್ರದಲ್ಲಿ ದಾವಾ ಮನೆಯನ್ನು ಮಾರಾಟ ಮಾಡಬಾರದೆಂದು ಷರತ್ತು ಇದೆ ಎಂದರೆ ಸರಿಯಲ್ಲ. ನಿ.ಪಿ-1 ನ್ನು ಪ್ರತಿವಾದಿಯು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಮೋಸಲು ಮಾಡಲು, ನಾನು ಜಮೀನು ಖರೀದಿಗೆ ಹಿಡಿದಿದ್ದೇನೆ ಅದಕ್ಕೆ ಸಾಕ್ಷಿಗಾಗಿ ಸಹಿ ಮಾಡಲು ಕರೆದುಕೊಂಡು ಹೋಗಿ ನಿ.ಪಿ-1 ಕ್ಕೆ ಸಹಿ ಪಡೆದಿರುತ್ತೇನೆಂದರೆ ಸರಿಯಲ್ಲ. ನಾನು ಖರೀದಿ ಕರಾರಿನ ಮೊತ್ತವನ್ನು ಪ್ರತಿವಾದಿ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಖರೀದಿ ಕರಾರು ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ-1 ರ ಸಾಕ್ಷಿದಾರರೊಂದಿಗೆ ನಾನು ಮಿಲಾಪೆಯಾಗಿ ನಿ.ಪಿ-1 ನ್ನು ಖೊಟ್ಟಿ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ಸಿವಿ.ಪಾಟೀಲ ರವರು ಸಹ ಇದರಲ್ಲಿ ಭಾಗೀಯಾಗಿ ಖೊಟ್ಟಿ ಖರೀದಿ ಪತ್ರವನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ:-** ಮುಕ್ತಾಯಗೊಳಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನವನ್ನು ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ನನ್ನ ಸಮಕ್ಷಮ

**ಸಾಕ್ಷಿದಾರರ ಸಹಿ.** **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**